Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 877/2023

ಸಿ ಡಬ್ಲ್ಯೂ-6
ಪಿ ಡಬ್ಲ್ಯೂ-4

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಪಾಂಡಪ್ಪ |
| ತಂದೆಯ ಹೆಸರು | ಃ- | ದನಸಿಂಗಪ್ಪ |
| ವಯಸ್ಸು | ಃ- | 65 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಹಾಲಭಾವಿ ತಾಂಡ |

**ದಿ.22-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1 ನನ್ನ ಹೆಂಡತಿ. ಚಾ.ಸಾ-2 ಮತ್ತು 3 ನಮ್ಮೂರಿನವರು ಪರಿಚಯ ಇದೆ. ಚಾ.ಸಾ-4 ಮತ್ತು 5 ನನ್ನ ಮಕ್ಕಳು. ಚಾ.ಸಾ-7 ನನ್ನ ತಮ್ಮ. 1 ರಿಂದ 3ನೇ ಆರೋಪಿತರು ನನ್ನ ಅಳಿಯಂದಿರು. 4ನೇ ಆರೋಪಿ ಅಕ್ಕ. 5ನೇ ಆರೋಪಿ ನನ್ನ ಸೊಸೆ. 6ನೇ ಆರೋಪಿ ನನ್ನ ಮಗಳು.

ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 9-00 ಗಂಟೆಗೆ ನಾನು ಮತ್ತು ಚಾ.ಸಾ-7 ರವರು ಹೊಲದಲ್ಲಿ ಇದ್ದೆವು. ನಂತರ ಮನೆಗೆ ಬಂದಾಗ ನಮ್ಮ ಮನೆಯ ಮುಂದೆ ಜಗಳ ಆಗಿತ್ತು. ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ಬಂದು 1 ಮತ್ತು 2ನೇ ಆರೋಪಿತರು ಚಾ.ಸಾ-1 ರವರ ಸೀರೆ ಹಿಡಿದು ಎಳೆದಾಡಿ ಹೊಡೆದಿರುತ್ತಾರೆ. 3ನೇ ಆರೋಪಿ ಚಾ.ಸಾ-4 ರವರಿಗೆ ಮೊಣಕಾಲಿಗೆ ಒದ್ದಿರುತ್ತಾನೆ. ಆಗ ನಾನು ಮತ್ತು ಚಾ.ಸಾ-7 ರವರು ಜಗಳ ಬಿಡಿಸಿರುತ್ತೇವೆ. ನಂತರ ನಾವು ಚಾ.ಸಾ-1, 4 ಮತ್ತು 5 ರವರಿಗೆ ಗಾಯ ಆಗಿದ್ದರಿಂದ ಆಸ್ಪತ್ರೆಗೆ ಹೋಗಿರುತ್ತೇವೆ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ:-**

ದಿನಾಂಕ 11-06-2023 ರಂದು ಬೆಳಿಗ್ಗೆ 9-00 ಗಂಟೆಗೆ ಆರೋಪಿತರು ಅಕ್ರಮಗುಂಪು ಕಟ್ಟಿಕೊಂಡು ಮನೆಗೆ ಬಂದು ಸೂಳೆ ಮಕ್ಕಳೆ ದಾಳೆ ಮಕ್ಕಳೆ ಎಂದು ಮನೆಯಲ್ಲಿ ಕುಂತಿರಿ ಹೊರಗಡೆ ಬನ್ನಿರಿ ಎಂದು ಬಾಯಿಗೆ ಕಿರುಚಾಡಿರುತ್ತಾರೆ ಎಂದರೆ ಸರಿ. ಗಣೇಶ ಮತ್ತು

ಶಾರದಾ ನಮ್ಮ ಹೊಲದಲ್ಲಿ ಪಾಲು ಯಾವಾಗ ಕೊಡುತ್ತೀರಾ ಎಂದು ಅವಾಚ್ಯವಾಗಿ ಬೈದಾಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು ಶ್ರೀ ಹೆಚ್.ವೈ ವಕೀಲರಿಂದ : -</u>**

ಜಮೀನಿನ ಪಾಲಿನ ಸಂಬಂಧ ನಮಗೂ ಮತ್ತು ಆರೋಪಿತರ ನಡುವೆ ವೈ-ಮನಸ್ಸು ಇದೆ ಎಂದರೆ ಸರಿಯಲ್ಲ. ಜಮೀನು ಸಂಬಂಧ ಮಾನ್ಯ ಹಿರಿಯರ ಸಿವಿಲ್ ನ್ಯಾಯಾಲಯದಲ್ಲಿ ದಾವೆ ನಡೆದಿದೆ ಎಂದರೆ ಸರಿ. ಜಗಳ ನಡೆಯಿತು ಎನ್ನುವ ಸಮಯದಲ್ಲಿ ನಾನು ಮತ್ತು ಚಾ.ಸಾ-7 ರವರು ಹೊಲದಲ್ಲಿ ಇದ್ದೆವು ಎಂದರೆ ಸರಿ. ನಮ್ಮ ಮನೆ ಮತ್ತು ಹೊಲ ಅರ್ಧ ಕಿಲೋಮೀಟರ್ ದೂರ ಇದೆ. ಜಗಳ ನಡೆದಾಗ ನಾವು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಹೊಲದಲ್ಲಿ ಇರುವುದರಿಂದ ಯಾರು ಯಾರಿಗೆ ಒದ್ದರು ಎಂದು ಹೇಳಲಾಗುವದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಸೀರೆ ಹಿಡಿದು ಎಳೆದಾಡಿದಾಗ ಸೀರೆ ಹರಿದಿತ್ತು. ಸದರಿ ಸೀರೆಯನ್ನು ಪೋಲಿಸರಿಗೆ ತೋರಿಸಿರುವುದಿಲ್ಲ. ಚಾ.ಸಾ-4 ಮತ್ತು 5 ರವರಿಗೆ ಗಾಯಗಳು ಆಗಿರಲಿಲ್ಲ ಆದರೆ ಒಳಪೆಟ್ಟಾಗಿದ್ದವು. ಆರೋಪಿತರು ಬಂದು ಚಾ.ಸಾ-1, 4 ಮತ್ತು 5 ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ಬಂದು ಅವರಿಗೆ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಹೆಂಡತಿಯ ಸೀರೆ ಹಿಡಿದು ಎಳೆದಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾ.ಸಾ-7 ರವರು ಜಗಳ ಬಿಡಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ-4 ಮತ್ತು 5 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಮತ್ತು ನಮ್ಮ ನಡುವೆ ಹೊಲದ ಸಂಬಂಧ ವೈಷಮ್ಯ ಇರುವದರಿಂದ ಅವರ ವಿರುದ್ದ ನನ್ನ ಹೆಂಡತಿ ಸುಳ್ಳು ಕೇಸು ಹಾಕಿರುತ್ತಾಳೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.